Phone: 08282-257424 Fax: 08282-256262
E-Mail: kuhrmsection@gmail.com Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451
**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

ಸಂಖ್ಯೆ: ಕುವಿ: ಮಾಸನಿ–7: 3735 :2019–20 ದಿನಾಂಕ:11–09–2019

## ಸುತ್ತೋಲೆ

ವಿಷಯ: ರಾಜ್ಯದಲ್ಲಿನ ಪ್ರಕೃತಿ ವಿಕೋಪ ಸಂತ್ರಸ್ತರ ನೆರವಿಗಾಗಿ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ಸಂಬಳವನ್ನು ಕಟಾವಣೆ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಆಇ 11 ಎಸ್‌ಆರ್‌ಪಿ 2019 ಬೆಂಗಳೂರು, ದಿನಾಂಕ:21–08–2019.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:11–09–2019.

****

ಸರ್ಕಾರದ ಉಲ್ಲೇಖಿತ ಆದೇಶದಲ್ಲಿ ರಾಜ್ಯದ ಪ್ರಕೃತಿ ವಿಕೋಪ ಸಂತ್ರಸ್ತರ ಪುನರ್ ವಸತಿ ಹಾಗೂ ಅವರ ಕಲ್ಯಾಣ ಉದ್ದೇಶಕ್ಕೆ ದೇಣಿಗೆ ನೀಡಲು ಸ್ವಯಂಪ್ರೇರಿತವಾಗಿ ಮುಂದಾಗಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಸದುದ್ದೇಶದ ತೀರ್ಮಾನವನ್ನು ಸರ್ಕಾರವು ಶ್ಲಾಘಿಸಿರುತ್ತದೆ. ಈ ಸಂಬಂಧ ಒಂದು ದಿನದ ಸಂಬಳವನ್ನು ಮುಖ್ಯ ಮಂತ್ರಿ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನೀಡಲು ಇಚ್ಛಿಸದ ನೌಕರರು ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳಿಗೆ ಈ ಬಗ್ಗೆ ಒಂದು ವಾರದೊಳಗೆ ಲಿಖಿತ ಅಭಿಮತವನ್ನು ಸಲ್ಲಿಸತಕ್ಕದ್ದು ಎಂದು ತಿಳಿಸಿರುತ್ತಾರೆ.

ಈ ಕುರಿತು ಒಂದು ದಿನದ ಸಂಬಳವನ್ನು ಮುಖ್ಯ ಮಂತ್ರಿ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ನೀಡಲು ಇಚ್ಛಿಸದ ಅಧ್ಯಾಪಕ / ಅಧ್ಯಾಪಕೇತರ ನೌಕರರು ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳಿಗೆ ದಿನಾಂಕ: 20–09–2019ರೊಳಗಾಗಿ ತಮ್ಮ ಅಭಿಮತವನ್ನು ಕಳುಹಿಸಿಕೊಡಲು ತಿಳಿಸಲಾಗಿದೆ. ಒಂದು ವೇಳೆ ನಿಗದಿತ ದಿನಾಂಕದೊಳಗೆ ಲಿಖಿತ ಅಭಿಮತ ಸ್ವೀಕೃತವಾಗದಿದ್ದಲ್ಲಿ ಸೆಪ್ಟೆಂಬರ್–2019ರ ಮಾಹೆಯ ಒಂದು ದಿನದ ವೇತನವನ್ನು ಕಟಾವಣೆ ಮಾಡಲು ನೌಕರರ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸಿ ವೇತನ ಕಟಾವಣೆಗೆ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

ಉಪ ಕುಲಸಚಿವ
ಉಪ ಕುಲಸಚಿವ
ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577451

ಸೂಚನೆ: ಮೇಲ್ಕಂಡ ಅಂಶಗಳನ್ನು ತಮ್ಮ ವಿಭಾಗದ ಎಲ್ಲಾ ಅಧ್ಯಾಪಕ / ಅಧ್ಯಾಪಕೇತರ ನೌಕರರ ಗಮನಕ್ಕೆ ತರಲು ಈ ಮೂಲಕ ಸೂಚಿಸಲಾಗಿದೆ. (ವಿ.ವಿ ಸುತ್ತೋಲೆ ಮತ್ತು ಸರ್ಕಾರದ ಆದೇಶದ ಪ್ರತಿಯನ್ನು www.kuvempu.ac.in ನಲ್ಲಿ ಪಡೆಯಬಹುದಾಗಿದೆ)

ಗೆ:

1. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
4. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ಚಿಕ್ಕಮಗಳುರು.
5. ಸಹ್ಯಾದ್ರಿ ವಿಜ್ಞಾನ / ಸಹ್ಯಾದ್ರಿ ಕಲಾ / ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಶಿವಮೊಗ್ಗ.
6. ನಿರ್ದೇಶಕರು – ಎಸ್ಟೇಟ್ /ಪ್ರಸಾರಾಂಗ / ವಿದ್ಯಾರ್ಥಿ ಕ್ಷೇಮಪಾಲನೆ / ದೂರ ಶಿಕ್ಷಣ ನಿರ್ದೇಶನಾಲಯ/ ಕಾಲೇಜು ಅಭಿವೃದ್ಧಿ ಪರಿಷತ್ತು/ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ /ಅಂಬೇಡ್ಕರ್ ಅಧ್ಯಯನ ಕೇಂದ್ರ, / ಮಹಿಳಾ ಅಧ್ಯಯನ ಕೇಂದ್ರ / ದೈಹಿಕ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
7. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್.ರಸ್ತೆ, ಕಡೂರು
8. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ.ಕಾಲೇಜು ಆವರಣ, ಜ್ಯೋತಿನಗರ, ಚಿಕ್ಕಮಗಳೂರು.
9. ಕಾರ್ಯಪಾಲಕ ಅಭಿಯಂತರರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
10. ಎಲ್ಲಾ ಉಪಕುಲಸಚಿವರಿಗೆ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
11. ಎಲ್ಲಾ ಸಹಾಯಕ ಕುಲಸಚಿವರು / ಅಧೀಕ್ಷಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
12. ಸಂಯೋಜನಾಧಿಕಾರಿಗಳು, ಐ.ಕ್ಯೂ.ಎ.ಸಿ., ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
13. ಶಿಕ್ಷಕ ಸಲಹೆಗಾರರು, ಸ್ನಾತಕೋತ್ತರ ಪುರುಷರ:ಮಹಿಳಾ ವಿದ್ಯಾರ್ಥಿಗಳ ನಿಲಯ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
14. ಕಾರ್ಯಕ್ರಮ ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ವಿಭಾಗ, ನಗರ ಕಛೇರಿ ಬೈಪಾಸ್ ರಸ್ತೆ, ಶಿವಮೊಗ್ಗ.
15. ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ, ಎಸ್.ಸಿ/ಎಸ್.ಟಿ. ಸೆಲ್/ ಓ.ಬಿ.ಸಿ. ಅಂಬೇಡ್ಕರ್ ಅಧ್ಯಯನ ಪೀಠ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
16. ನಿರ್ದೇಶಕು, ಯುಸಿಸಿಎಫ್ ಮತ್ತು ಐಟಿ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
17. ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
18. ವೈದ್ಯಾಧಿಕಾರಿಗಳು, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19. ಪ್ರಿನ್ಸಿಪಾಲರು, ಎಸ್.ಎಂ.ಆರ್.ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ.
20. ವ್ಯವಸ್ಥಾಪಕರು, ವಿಶ್ವವಿದ್ಯಾಲಯದ ಅತಿಥಿ ಗೃಹ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
21. ಆಪ್ತ ಕಾರ್ಯಾಲಯ: ಕುಲಪತಿಗಳು, ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
22. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿನ ಪ್ರಕೃತಿ ವಿಕೋಪ ಸಂತ್ರಸ್ತರ ನೆರಪಿಗಾಗಿ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ಸಂಬಳವನ್ನು ಕಟಾವು ಮಾಡುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿ ಇತ್ತೀಚಿಗೆ ಸಂಭವಿಸಿದ ಅತಿವೃಷ್ಟಿಯ ಕಾರಣದಿಂದಾಗಿ, ರಾಜ್ಯದಲ್ಲಿನ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳು, ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಪ್ರವಾಹದಿಂದ ಉಂಟಾದ ಪ್ರಕೃತಿ ವಿಕೋಪ ಸಂತ್ರಸ್ತರ ನೆರವಿಗಾಗಿ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಟಾವು ಮಾಡಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಲು ಸರ್ಕಾರಿ ನೌಕರರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುವುದರಿಂದ ಈ ಕುರಿತು ಸೂಕ್ತ ಆದೇಶವನ್ನು ಹೊರಡಿಸಬೇಕೆಂದು ಸರ್ಕಾರದ ವಿವಿಧ ನೌಕರರ ಸೇವಾ ಸಂಘಟನೆಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತವೆ.

ಮುಂದುವರೆದು, ರಾಜ್ಯ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಸಹ ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 13-8-2019ರ ತಮ್ಮ ಮನವಿಯಲ್ಲಿ ಇದೇ ವಿಷಯದ ಬಗ್ಗೆ ಪ್ರಸ್ತಾಪಿಸಿ, ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಇಲಾಖೆಗಳ ಹಾಗೂ ಎಲ್ಲಾ ವೃಂದದ ರಾಜ್ಯ ಸರ್ಕಾರಿ ನೌಕರರು, ನಿಗಮ-ಮಂಡಳಿ, ಸರ್ಕಾರದ ಅನುದಾನಿತ ಶಿಕ್ಷಣ ಸಂಸ್ಥೆ, ಪ್ರಾಧಿಕಾರಗಳು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿ/ನೌಕರರ ಒಂದು ದಿನದ ವೇತನವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಟಾವು ಮಾಡಿ, ಪ್ರಕೃತಿ ವಿಕೋಪ ಸಂತ್ರಸ್ತರ ಪುನರ್ ವಸತಿ ಉದ್ದೇಶಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಲು ಎಲ್ಲಾ ಜಿಲ್ಲಾ ಮತ್ತು ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ರಾಜ್ಯದ ಪ್ರಕೃತಿ ವಿಕೋಪ ಸಂತ್ರಸ್ತರ ಪುನರ್ ವಸತಿ ಹಾಗೂ ಅವರ ಕಲ್ಯಾಣ ಉದ್ದೇಶಕ್ಕೆ ದೇಣಿಗೆ ನೀಡಲು ಸ್ವಯಂಪ್ರೇರಿತವಾಗಿ ಮುಂದಾಗಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಸದುದ್ದೇಶದ ತೀರ್ಮಾನವನ್ನು ಸರ್ಕಾರವು ಶ್ಲಾಘಿಸುತ್ತದೆ ಹಾಗೂ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಆಇ 11 ಎಸ್‌ಆರ್‌ಪಿ 2019,**
**ಬೆಂಗಳೂರು, ದಿನಾಂಕ: 21ನೇ ಆಗಸ್ಟ್ 2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಂಭವಿಸಿರುವ ಪ್ರಕೃತಿ ವಿಕೋಪ ಸಂತ್ರಸ್ತರ ಹಾನಿಯನ್ನು ಪರಿಹರಿಸಲು ಸರ್ಕಾರಿ ನೌಕರರ ಸಂಬಳದಿಂದ 2019ರ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳ ಒಂದು ದಿನದ ಸಂಬಳವನ್ನು ಕಟಾವು ಮಾಡಿ **ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪಕ್ಕೆ** ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ:-

(ಅ) ನೌಕರರ ಒಂದು ದಿನದ ಸಂಬಳದ ಕೊಡುಗೆಯನ್ನು (ಒಟ್ಟು ಮೊತ್ತವನ್ನು ರೂಪಾಯಿಗೆ ಸಮನಾಗಿಸಿ ಭಿನ್ನಾಂಶವನ್ನು ನಿರ್ಲಕ್ಷಿಸುವುದು) 2019 ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಿನ ಸಂಬಳದ ಬಿಲ್‌ನಿಂದ ಕಟಾವು ಮಾಡುವ ಮೂಲಕ ಸರ್ಕಾರಕ್ಕೆ ಜಮೆ ಮಾಡುವ ಅಧಿಕಾರವನ್ನು ಸಂಬಂಧಿಸಿದ ವೇತನ ಬಟವಾಡೆ ಮಾಡುವ ಅಧಿಕಾರಿಗಳು ಮತ್ತು ಖಜಾನೆ ಅಧಿಕಾರಿಗಳು ಪಡೆದಿರುತ್ತಾರೆ.

(ಆ) ಒಂದು ದಿನದ ಸಂಬಳವನ್ನು ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪಕ್ಕೆ ನೀಡಲು ಇಚ್ಛಿಸದ ನೌಕರರು ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳಿಗೆ ಈ ಬಗ್ಗೆ ಒಂದು ವಾರದೊಳಗೆ ಲಿಖಿತ ಅಭಿಮತವನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನೌಕರರಿಂದ ಲಿಖಿತ ಅಭಿಮತ ಸ್ವೀಕೃತವಾಗದಿದ್ದಲ್ಲಿ, ಒಂದು ದಿನದ ವೇತನವನ್ನು ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಿನ ಸಂಬಳದಲ್ಲಿ ಕಟಾವು ಮಾಡಲು ನೌಕರರ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸಲಾಗುವುದು. ಆಗಸ್ಟ್ ತಿಂಗಳ ವೇತನದ ಬಿಲ್ಲನ್ನು ತಯಾರಿಸದೆ ಇರುವ ಕಛೇರಿಗಳಲ್ಲಿ ಆಗಸ್ಟ್ ತಿಂಗಳ ವೇತನದಲ್ಲಿ ಮತ್ತು ಉಳಿದ ಕಛೇರಿಗಳಲ್ಲಿ ಸೆಪ್ಟೆಂಬರ್ ತಿಂಗಳಿನ ವೇತನದಲ್ಲಿ ಕಟಾವು ಮಾಡುವುದು.

(ಇ) ಪ್ರತಿಯೊಬ್ಬ ನೌಕರನ/ಳ ಸಂಬಳದಿಂದ ಕಟಾವು ಮಾಡಿದ ವೇತನದ ಅಂಶವನ್ನು ವೇತನ ಬಿಲ್ಲಿನಲ್ಲಿ ಅವರ ಹೆಸರಿನ ಎದುರಿನಲ್ಲಿ **"8658-00-102-4-32: State Government Employees Contribution towards Flood Relief"** ಲೆಕ್ಕ ಶೀರ್ಷಿಕೆಗೆ ಎಂಬ ಪ್ರತ್ಯೇಕ ಕಾಲಮ್ಮಿನಲ್ಲಿ ತೋರಿಸುವುದು ಮತ್ತು ಸಮಗ್ರ ವೇತನ ಬಿಲ್ಲಿನಲ್ಲಿ ಮುರಿದುಕೊಂಡ ಒಟ್ಟು ಮೊತ್ತವನ್ನು ವೇತನ ಬಿಲ್ಲಿನ ಮುಖಪುಟದಲ್ಲಿ **"8449-00-120-9-61: Flood Relief Fund"** ಲೆಕ್ಕ ಶೀರ್ಷಿಕೆಗೆ ಎಂದು ಸ್ಪಷ್ಟವಾಗಿ ನಮೂದಿಸಬೇಕು. ಖಜಾನೆ ಅಧಿಕಾರಿಯು ಒಟ್ಟು ಮೊತ್ತವನ್ನು ಈ ಶೀರ್ಷಿಕೆಗೆ ಜಮಾ ಮಾಡುವ ಮೂಲಕ ಬಿಲ್ಲನ್ನು ಪಾವತಿ ಮಾಡಬೇಕು. ವೇತನವನ್ನು ಬಟವಾಡೆ ಮಾಡಲು ನಿವ್ವಳ ಮೊತ್ತಕ್ಕೆ ಚೆಕ್ಕನ್ನು ಬಟವಾಡೆ ಅಧಿಕಾರಿಗೆ ಅವರು ನೀಡುವರು.

(ಈ) ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪಕ್ಕೆ ವೇತನ ಬಿಲ್ಲುಗಳಿಂದ ಕಟಾವು ಮಾಡಲಾದ ಮೊತ್ತವನ್ನು **"8449-00-120-9-61: Flood Relief Fund"**ಗೆ ಎಂಬ ಲೆಕ್ಕಶೀರ್ಷಿಕೆಗೆ ಖಜಾನೆಯು ಜಮಾ ಮಾಡುವುದು. ಅಮಾನತ್ತು ಲೆಕ್ಕ ಶೀರ್ಷಿಕೆಗೆ ಮಾಡುವ ಹೊಂದಾಣಿಕೆಯು, ಕರ್ನಾಟಕ ಖಜಾನೆ ಸಂಹಿತೆಯ ಅನುಚ್ಛೇದ 107 ಮತ್ತು ಇದೇ ಸಂಹಿತೆಯಲ್ಲಿ ನಿಗಧಿಪಡಿಸಿದ 13 ಮತ್ತು 14ನೇ ಸಂಖ್ಯೆಯ ನಮೂನೆಯ ಪ್ರಕಾರ ವರ್ಗಾವಣೆಯ ಮೂಲಕ ಮಾಡತಕ್ಕದ್ದು.

(ಉ) ರಾಜ್ಯ ಸರ್ಕಾರಿ ನೌಕರರ ವೇತನದಿಂದ ಕಟಾವು ಮಾಡಿ ಲೆಕ್ಕ ಶೀರ್ಷಿಕೆ **"8658-00-102-4-32 State Government Employees Contribution towards Flood Relief Fund"**ಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಲೆಕ್ಕ ಶೀರ್ಷಿಕೆ **"8449-00-120-9-61: Flood Relief Fund"**ಗೆ ವರ್ಗಾವಣೆ ಮೂಲಕ ಜಮೆ ಮಾಡತಕ್ಕದ್ದು. ಹೀಗೆ ಜಮೆ ಮಾಡಲಾದ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ, ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ: **37887098605, IFSC Code:SBIN0040277, MICR No.560002419** ಗೆ ಚೆಕ್ ಮುಖಾಂತರ ಜಮೆ ಮಾಡುವುದು.

(ಊ) ಉಪಖಜಾನೆಗಳು ಮುರಿದುಕೊಂಡ ಮೊತ್ತದ ಬಗ್ಗೆ ಒಂದು ಪಟ್ಟಿಯನ್ನು ಜಿಲ್ಲಾ ಖಜಾನೆಗಳಿಗೆ ಕಳುಹಿಸುವುದು ಮತ್ತು ಜಿಲ್ಲಾ ಖಜಾನೆಗಳು ಅಮಾನತ್ತು ಲೆಕ್ಕಶೀರ್ಷಿಕೆ **"8658-00-102-4-32: State Government Employees Contribution towards Flood Relief"ಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಲೆಕ್ಕ ಶೀರ್ಷಿಕೆ "8449-00-120-9-61: Flood Relief Fund"ಗೆ ವರ್ಗಾವಣೆ ಮೂಲಕ ಜಮೆ ಮಾಡುವುದು.** ಹೀಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ ಖಾತೆಗೆ** ಆನ್‌ಲೈನ್ ಮುಖಾಂತರ ವರ್ಗಾಯಿಸಲು ಅಥವಾ ಚೆಕ್ಕುಗಳ ಮೂಲಕ ಪಾವತಿಸಲು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವುದು. ಹೀಗೆ ಕೈಗೊಂಡ ಕ್ರಮದ ಮಾಹಿತಿಯನ್ನು ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಯವರಿಗೆ ಕಳುಹಿಸುವುದು.

(ಋ) ನೌಕರರ ವೇತನವನ್ನು ಹೆಚ್‌ಆರ್‌ಎಂಎಸ್ ತಂತ್ರಾಂಶ ಪದ್ಧತಿಯ ಮೂಲಕ ಪಾವತಿಸದ ಪ್ರಕರಣಗಳಲ್ಲಿಯೂ ಸಹ ಈ ಮೇಲಿನ ವಿಧಾನವನ್ನೇ ಅನುಸರಿಸತಕ್ಕದ್ದು. ಇಂತಹ ಪ್ರಕರಣಗಳಲ್ಲಿ ಜಿಲ್ಲಾ ಖಜಾನೆಗಳು ಅಮಾನತ್ತು ಲೆಕ್ಕ ಶೀರ್ಷಿಕೆಗೆ ಖರ್ಚು ಹಾಕುವುದರ ಮೂಲಕ **ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ** ಖಾತೆಗೆ ಅಮಾನತ್ತು ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತಕ್ಕೆ ಒಂದು ಸಂಚಿತ ಚೆಕ್ಕನ್ನು ನೀಡುವುದು ಮತ್ತು ಆ ಚೆಕ್ಕುಗಳನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ, ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ: 37887098605** ಗೆ ಜಮಾ ಮಾಡಲು ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಕಳುಹಿಸುವುದು.

(ಎ) 2019ರ ಆಗಸ್ಟ್ ಅಥವಾ ಸೆಪ್ಟಂಬರ್ ಮಾಹೆಯಲ್ಲಿ ಸ್ವೀಕರಿಸಲಾದ ವೇತನ ಬಿಲ್ಲುಗಳ ನಿರ್ವಹಣೆಗಳನ್ನು 2019ರ ಡಿಸೆಂಬರ್ 10ನೇ ದಿನಾಂಕದೊಳಗೆ ಪೂರೈಸಬೇಕು. 31-12-2019ರ ನಂತರ ಪಾವತಿ ಮಾಡಿದ ಬಿಲ್ಲುಗಳ ಪ್ರಕರಣಗಳಲ್ಲಿ ಅವುಗಳನ್ನು ಪಾವತಿ ಮಾಡಿದ ಒಂದು ವಾರದ ಒಳಗೆ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಚೆಕ್ಕುಗಳನ್ನು ಕಳುಹಿಸಬೇಕು. ಎಲ್ಲಾ ಜಿಲ್ಲಾ ಖಜಾನೆಗಳು ಮತ್ತು ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯು ನೀಡಿದ ಚೆಕ್ಕುಗಳು/ಆನ್‌ಲೈನ್ ಪಾವತಿ ದಾಖಲೆಗಳ ಒಂದು ಪ್ರತಿಯನ್ನು ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಜಮೆಗಳ ಲೆಕ್ಕ ಹೊಂದಾಣಿಕೆಯ ಉದ್ದೇಶಕ್ಕಾಗಿ ಕಳುಹಿಸಬೇಕು ಹಾಗೂ ಇದರ ಒಂದು ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಕಳುಹಿಸುವುದು.

(ಏ) ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯಲ್ಲಿ ಸ್ವೀಕರಿಸಲ್ಪಡುವ ವೇತನ ಬಿಲ್ಲುಗಳ ಮೇಲೂ ಸಹ ಈ ಮೇಲಿನ ಕ್ರಮಗಳನ್ನು ಪಾಲಿಸುವುದು.

(ಐ) ಕರ್ನಾಟಕ ರಾಜ್ಯದ ಪ್ರಕೃತಿ ವಿಕೋಪಕ್ಕೆ ನೀಡಲ್ಪಡುವ ಸರ್ಕಾರಿ ನೌಕರರ ಒಂದು ದಿನದ ವೇತನ ದೇಣಿಗೆಯನ್ನು ಕಟಾವು ಮಾಡಿ ಈ ಮೇಲಿನ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿ ಅದನ್ನು **ಮುಖ್ಯ ಮಂತ್ರಿಯವರ ಪರಿಹಾರ** ನಿಧಿ **ಪ್ರಕೃತಿ** ವಿಕೋಪ **ಖಾತೆಗೆ** ಪಾವತಿಸುವ ಪ್ರಕ್ರಿಯೆಯ ಮೇಲುಸ್ತುವಾರಿಗಾಗಿ ಖಜಾನೆ ನಿರ್ದೇಶಕರು ನೇಮಿಸುವ ನೋಡಲ್ ಅಧಿಕಾರಿಯು ಈ ಪ್ರಕ್ರಿಯೆಯ ಸಂಪೂರ್ಣ ಮೇಲುಸ್ತುವಾರಿಯನ್ನು ನಿರ್ವಹಿಸತಕ್ಕದ್ದು. ಈ ಮೇಲಿನ ಯೋಜನೆಯ ಅನುಷ್ಠಾನದಲ್ಲಿ ತೊಡಕುಗಳುಂಟಾದಲ್ಲಿ ಸಕ್ಷಮ ಪ್ರಾಧಿಕಾರಿಯೊಂದಿಗೆ ಸಮಾಲೋಚಿಸಿ ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ನೋಡಲ್ ಅಧಿಕಾರಿಯವರು ಹೊಂದಿರುತ್ತಾರೆ.

2. ಆಗಸ್ಟ್ ಅಥವಾ ಸೆಪ್ಟಂಬರ್-2019ರ ವೇತನ ಎಂದರೆ, ಸರ್ಕಾರಿ ನೌಕರನಿಗೆ ಪ್ರಸ್ತುತ ಆಗಸ್ಟ್ 31ರಂದು ಅಥವಾ ಸೆಪ್ಟಂಬರ್ 30ರಂದು ಲಭ್ಯವಿರುವ ವೇತನ ಎಂದು ಪರಿಗಣಿಸತಕ್ಕದ್ದು. ಪರಂತು, ತದನಂತರದಲ್ಲಿ ಹೊರಡಿಸುವ ಯಾವುದೇ ಆದೇಶಗಳ ಪ್ರಕಾರ ಹೆಚ್ಚಳವಾಗುವ ವೇತನವನ್ನು ಪರಿಗಣಿಸತಕ್ಕದ್ದಲ್ಲ.

3. ಮಹಾಲೇಖಪಾಲರು ನೀಡಿದ ಅಧಿಕಾರ ಪತ್ರದ ಮೇಲೆ ತಮ್ಮ ವೇತನವನ್ನು ಖಜಾನೆಗಳಿಂದ ಪಡೆಯುವ ಅಧಿಕಾರಿಗಳೂ ಸಹ ಮೇಲಿನ ಕ್ರಮವನ್ನು ಪಾಲಿಸುವುದು.

4. ಐ.ಆರ್.ಎಲ್.ಎ. ಪದ್ಧತಿಗೆ ಒಳಪಡುವ ಅಧಿಕಾರಿಗಳ ಪ್ರಕರಣಗಳಲ್ಲಿ ವೇತನ ಚೆಕ್ಕುಗಳನ್ನು ನೀಡುವ ಪ್ರಾಧಿಕಾರಿಗಳು ಚೆಕ್ಕುಗಳನ್ನು ನೀಡುವ ಸಮಯದಲ್ಲಿ ಕೊಡುಗೆ ಅಂಶವನ್ನು ಮುರಿದುಕೊಳ್ಳುವುದು ಮತ್ತು ಮುರಿದುಕೊಂಡ ಅಂಶದ ಅವಶ್ಯಕ ಹೊಂದಾಣಿಕೆಯನ್ನು ಮಾಡುವುದು. ಹಾಗೂ ಈ ಬಗ್ಗೆ ಮಾಹಿತಿಯನ್ನು ಮುಖ್ಯ ಮಂತ್ರಿಗಳ ಕಾರ್ಯದರ್ಶಿ ಹಾಗೂ ಖಜಾನೆ ಅಧಿಕಾರಿಯವರು ನೇಮಿಸುವ ನೋಡಲ್ ಅಧಿಕಾರಿಗೆ ನೀಡುವುದು.

5. ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವ ವಿದ್ಯಾಲಯಗಳೂ ಸೇರಿದಂತೆ ಅನುದಾನ ಪಡೆಯುವ ಇತರ ಸಂಸ್ಥೆಗಳು ತಮ್ಮ ಅಧೀನದಲ್ಲಿ ಕೆಲಸ ಮಾಡುವ ನೌಕರರ ಸಂಬಂಧದಲ್ಲಿಯೂ ಸಹ ಈ ಮೇಲಿನ ರೀತಿಯ ಕ್ರಮವನ್ನು ಅನುಸರಿಸತಕ್ಕದ್ದು. ತಮ್ಮ ಕೊಡುಗೆಯನ್ನು ಸೂಚಿಸುವ ಚೆಕ್ಕುಗಳನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ, ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ:37887098605** ಗೆ ಜಮಾ ಮಾಡಲು ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಕಳುಹಿಸುವುದು.

6. ಈ ಆದೇಶದನ್ವಯ ಕಟಾವು ಮಾಡಿ ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ಸಾರ್ವಜನಿಕ ವಂತಿಕೆ ನಿಧಿಗೆ ಸಂದಾಯವಾಗುವ ಮೊತ್ತವು ಆದಾಯ ತೆರಿಗೆಯ ಅಧಿನಿಯಮದ ಪ್ರಕರಣ **80(G)** ಯಡಿ ಶೇಕಡ 100ರಷ್ಟು ಆದಾಯ ತೆರಿಗೆಯಿಂದ ವಿನಾಯಿತಿಗೆ ಒಳಪಡುತ್ತದೆಂದೂ. ಅದರಂತೆ, ಸರ್ಕಾರಿ ನೌಕರರು ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ಸಾರ್ವಜನಿಕ ವಂತಿಕೆ ನಿಧಿಗೆ ಸಂದಾಯ ಮಾಡುವ ಮೊತ್ತಕ್ಕೆ ಶೇಕಡಾ 100ರಷ್ಟು ತೆರಿಗೆ ವಿನಾಯಿತಿಯನ್ನು ಪಡೆಯಲು ಅರ್ಹರಿರುತ್ತಾರೆಂದು ತಿಳಿಸಲಾಗಿದೆ. ಆದಾಯ ತೆರಿಗೆ ವಿನಾಯಿತಿ ಪಡೆಯಲು PAN No. AAAGC1692P ಅಥವಾ GGGGG0000G ಅನ್ನು ಬಳಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜಿ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).

ಗೆ:

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 25 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.

2. ಪ್ರಧಾನ ಮಹಾಲೇಖಪಾಲರು(G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ.ನಂ.5398) ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
6. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
7. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
8. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
9. ಎಲ್ಲಾ ಪ್ರಾದೇಶಿಕ ಆಯುಕ್ತರು.
10. ಆಯುಕ್ತರು, ರಾಜ್ಯ ಆದಾಯ ತೆರಿಗೆ ಇಲಾಖೆ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
11. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
13. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು.
14. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
15. ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳು/ರಿಜಿಸ್ಟ್ರಾರ್‌ಗಳು.
16. ಎಲ್ಲಾ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
17. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
18. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
19. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
20. ಜಂಟಿ ಕಾರ್ಯದರ್ಶಿ, ಮುಖ್ಯ ಮಂತ್ರಿಗಳ ಪರಿಹಾರ ನಿಧಿ ಶಾಖೆ.
21. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
22. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
23. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
24. ಅಧ್ಯಕ್ಷರು, ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘ(ರಿ). ಕಬ್ಬನ್ ಉದ್ಯಾನವನ, ಬೆಂಗಳೂರು.
25. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ (ಲೆಕ್ಕಪತ್ರ/ಐ.ಆರ್.ಎಲ್.ಎ.), ಬೆಂಗಳೂರು.
26. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
27. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
28. ವಾರಪತ್ರ/ಶಾಖೆಯ ರಕ್ಷಾ ಕಡತ.

**ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ <u>www.finance.kar.nic.in</u> ವೀಕ್ಷಿಸಿ.**